# ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ



**October 2 2026**

**157th birth anniversary celebration of Mahatma Gandhiji**

ಜಾತಿ- ಧರ್ಮ ವೈಷಮ್ಯ ನಿವಾರಣೆಗೆ ಗಾಂಧಿ ಮಾರ್ಗ ಪ್ರಸ್ತುತ- ಬರಗೂರು ರಾಮಚಂದ್ರಪ್ಪ ಅಭಿಮತ

ಜಾತಿಯ ಜೈಲುಗಳು ಮತ್ತು ಧರ್ಮ ದ್ವೇಷದ ದ್ವೀಪಗಳಲ್ಲಿ ಬಂಧಿಗಳಾಗಿರುವ ದೇಶವಾಸಿಗಳನ್ನು ಬಿಡುಗಡೆಗೊಳಿಸಿ ಬಹುತ್ವ ಭಾರತದ ನೆಲೆಯನ್ನು ಸದೃಢಗೊಳಿಸಲು ಗಾಂಧೀಜಿಯವರ ತತ್ವ ಚಿಂತನೆ ಇಂದು ಅತ್ಯಂತ ಪ್ರಸ್ತುತವಾಗಿದೆ ಎಂದು ಪ್ರಗತಿಪರ ಚಿಂತಕರಾದ ನಾಡೋಜ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ವತಿಯಿಂದ ಏರ್ಪಡಿಸಲಾಗಿದ್ದ ಮಹಾತ್ಮ ಗಾಂಧಿಯವರ 157ನೇ ಜಯಂತಿಯ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಅವರು ಪ್ರಚಲಿತ ವಿದ್ಯಮಾನಗಳ ಬಗ್ಗೆ ವಿಶ್ಲೇಷಿಸಿದರು.

ದೇಶದಲ್ಲೀಗ ವ್ಯಕ್ತಿತ್ವ ಭಂಜನೆಯ ಹುನ್ನಾರ ಮುನ್ನಲೆಗೆ ಬಂದಿದ್ದು ಮಹಾತ್ಮ ಗಾಂಧಿಯವರೂ ಅಂತಹ ನಕಾರಾತ್ಮಕ ಕೃತ್ರಿಮ ದಾಳಿಗೆ ಒಳಗಾಗುತ್ತಿರುವುದು ಅಪಾರ ವಿಷಾದದ ಸಂಗತಿಯಾಗಿದೆ ಎಂದು ಅವರು ವಿಮರ್ಶಿಸಿದರು.

ನುಡಿ ನೈತಿಕತೆ ಹಾಗೂ ರಾಜಕೀಯ ಮತ್ತು ಸಾಮಾಜಿಕ ನೈತಿಕತೆ ನಶಿಸುತ್ತಿರುವ ಇಂದಿನ ಸಂಕೀರ್ಣ ಸನ್ನಿವೇಶದಲ್ಲಿ ಸ್ವಾತಂತ್ರ್ಯ ಮತ್ತು ಸಂವಿಧಾನ ಮೌಲ್ಯಗಳನ್ನು ಸಂರಕ್ಷಿಸುವ ಹೊಣೆ ಎಲ್ಲರ ಮೇಲಿದೆ ಎಂದು ಅವರು ತಿಳಿಸಿದರು.

ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯ ಸಹಜವೆಂದ ಅವರು ಸರ್ಕಾರವನ್ನು ಟೀಕಿಸುವವರಿಗೆ ದೇಶ ದ್ರೋಹಿಗಳ ಹಣೆಪಟ್ಟಿ ಹಚ್ಚುವ ಪ್ರವೃತ್ತಿಯನ್ನು ಬಲವಾಗಿ ಖಂಡಿಸಿದರು. ಸಂವಾದದ ಮುಕ್ತ ವಾತಾವರಣ ಮಾಯವಾಗಿದೆ ಎಂದು ಅವರು ವಿಷಾದಿಸಿದರು.

ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ ಮತ್ತು ಅಂಬೇಡ್ಕರ್ ಅವರ ಮಹಾಡ್ ಸತ್ಯಾಗ್ರಹ ವಸಾಹತುಶಾಹಿ ಹಾಗೂ ವರ್ಣಾಹತುಶಾಹಿಯ ವಿರುದ್ಧದ ಮಾರ್ಮಿಕ ಸಂಕೇತಗಳೆಂದು ಪ್ರೊ. ಬರಗೂರು ರಾಮಚಂದ್ರಪ್ಪನವರು ಬಣ್ಣಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ.ರಮೇಶ್.ಬಿ. ರವರು ಗಾಂಧೀಜಿಯವರ ತತ್ತ್ವ ಮತ್ತು ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಪ್ರಬುದ್ಧ ಭಾರತ ನಿರ್ಮಾಣಕ್ಕೆ ಮುಂದಾಗುವಂತೆ ವಿದ್ಯಾರ್ಥಿಗಳನ್ನು ಉತ್ತೇಜಿಸಿದರು.

ವಿಶ್ವವಿದ್ಯಾಲಯಗಳು ವಿವಾದದ ಕೇಂದ್ರಗಳಾಗುತ್ತಿರುವ  ಪ್ರಸ್ತುತ ಸನ್ನಿವೇಶದಲ್ಲಿ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ನ್ಯಾಯ ಮತ್ತು ಮಾನವೀಯ ಮೌಲ್ಯಗಳನ್ನು ಬಿತ್ತಲು ಅಧ್ಯಾಪಕರು ವಿಶೇಷ ಗಮನ ಹರಿಸಬೇಕೆಂದು ಅವರು ಸಲಹೆಯಿತ್ತರು.

ವಿಶ್ವವಿದ್ಯಾನಿಲಯದ ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ವತಿಯಿಂದ ಶೀಘ್ರದಲ್ಲೇ ಗಾಂಧೀಜಿಯವರ ತತ್ವಗಳ ಅಧ್ಯಯನದ ಡಿಪ್ಲೊಮೊ ಕೋರ್ಸ್ ಆರಂಭಿಸುವ ಇಂಗಿತವನ್ನು ಅವರು ವ್ಯಕ್ತಪಡಿಸಿದರು.

ದಿವಂಗತ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಅಮೂಲ್ಯ ಕೊಡುಗೆಯನ್ನು ಇದೇ ವೇಳೆ ಸ್ಮರಿಸಲಾಯಿತು.  ಕಾರ್ಯಕ್ರಮಕ್ಕೆ ಮುನ್ನ ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಹುತಾತ್ಮ ವಿದ್ಯಾರ್ಥಿಗಳ ಸ್ಮಾರಕಕ್ಕೆ ಗಣ್ಯರು ಪುಷ್ಪನಮನದ ಮೂಲಕ ಗೌರವ ಸಮರ್ಪಿಸಿದರು.

ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಜ್ಯೋತಿ ವೆಂಕಟೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ಕುಲಸಚಿವರಾದ (ಮೌಲ್ಯಮಾಪನ) ಪ್ರೊ.ರಮೇಶ. ಬಿ.ಕುಡೇನಟ್ಟಿ, ವಿತ್ತಾಧಿಕಾರಿಗಳಾದ ಎಂ.ವಿ.ವಿಜಯಲಕ್ಷ್ಮಿ ಹಾಗೂ ಸಿಂಡಿಕೇಟ್ ಸದಸ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಡಾ.ಪ್ರಿಯಾಂಕ ಮತ್ತು ಡಾ.ಮಾಲಿನಿ ಕಾರ್ಯಕ್ರಮ ನಿರ್ವಹಿಸಿದರು.

ಗಾಂಧಿ ಜಯಂತಿಯ ಅಂಗವಾಗಿ ಆಯೋಜಿಸಸಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಸ್ಮರಣಿಕೆ  ವಿತರಿಸಲಾಯಿತು. ವಿದ್ಯಾರ್ಥಿಗಳಿಂದ ಗಾಂಧಿ ವಿಚಾರಧಾರೆಯ ಕುರಿತು ಭಾಷಣ ಹಾಗೂ ಗಾಂಧೀಜಿಯವರಿಗೆ ಪ್ರಿಯವಾದ ಗೀತೆಗಳ ಗಾಯನ ನೆರವೇರಿತು.

Dr. Manmohan Singh Bengaluru City University

Gandhian Path Relevant to Eradicate Caste-Religion Antagonism - Barguru Ramachandrappa

Progressive thinker Nadoja Barguru Ramachandrappa opined that Gandhiji's philosophy is highly relevant today to release the people of the country who are imprisoned in caste jails and islands of religious hatred and to strengthen the foundation of pluralistic India.

He was participating as the chief guest at the 157th birth anniversary celebration of Mahatma Gandhiji organized by the Mahatma Gandhi Study Centre of Dr. Manmohan Singh Bengaluru City University, and analyzed current affairs.

He criticized that a conspiracy of character assassination has come to the fore in the country now, and it is a matter of great regret that even Mahatma Gandhi is being subjected to such negative attacks.

He said that in today's complex situation where moral values in speech and political and social ethics are decaying, everyone has the responsibility to protect the values of freedom and the Constitution.

He said that dissent is natural in a democracy and strongly condemned the tendency to brand those who criticize the government as anti-nationals. He regretted that the open atmosphere for dialogue has disappeared.

Prof. Barguru Ramachandrappa described Gandhiji's Salt Satyagraha and Ambedkar's Mahad Satyagraha as poignant symbols against colonialism and casteism.

Vice Chancellor Prof. Ramesh B., who presided over the function, encouraged students to build an enlightened India by adopting Gandhiji's principles and ideals in life.

He advised that in the present situation where universities are becoming centres of controversy, teachers should pay special attention to inculcating social justice and human values among students.

He expressed his intention to start a Diploma Course on the study of Gandhiji's principles soon by the University's Mahatma Gandhi Study Centre.

The invaluable contribution of late Prime Minister Lal Bahadur Shastri was also remembered on the occasion. Before the programme, dignitaries paid floral tributes to the students martyrs' memorial at Mysore Bank Circle.

Prof. Jyothi Venkatesh, Director of the Mahatma Gandhi Study Centre, delivered the introductory speech. Registrar (Evaluation) Prof. Ramesh B. Kudenatti, Finance Officer M.V. Vijayalakshmi and Syndicate members were present on the dais. Dr. Priyanka and Dr. Malini compered the programme.

As part of Gandhi Jayanti celebrations prizes and mementoes were distributed to the students who won in various competitions. Students delivered speeches on Gandhian thought and sang songs dear to Gandhiji.





ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
DR. MANMOHAN SINGH
BENGALURU CITY UNIVERSITY
ಮಹಾತ್ಮ ಗಾಂಧೀಜಿ ರವರ
157 ನೇ ಜನ್ಮ ದಿನಾಚರಣೆ
ಶುಕ್ರವಾರ
02 ಅಕ್ಟೋಬರ್ 2026


DR. MANMOHAN SINGH
BENGALURU CITY UNIVERSITY
ಮಹಾತ್ಮ ಗಾಂಧೀಜಿ ರವರ
157 ನೇ ಜನ್ಮ ದಿನಾಚರಣೆ
ಶುಕ್ರವಾರ
02 ಅಕ್ಟೋಬರ್ 2026


DR. MANMOHAN SINGH
BENGALURU CITY UNIVERSITY
ಮಹಾತ್ಮ ಗಾಂಧೀಜಿ ರವರ
157 ನೇ ಜನ್ಮ ದಿನಾಚರಣೆ
ಶುಕ್ರವಾರ
02 ಅಕ್ಟೋಬರ್ 2026




ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
DR. MANMOHAN SINGH
BENGALURU CITY UNIVERSITY
ಮಹಾತ್ಮ ಗಾಂಧೀಜಿ ರವರ
157 ನೇ ಜನ್ಮ ದಿನಾಚರಣೆ
ಶುಕ್ರವಾರ
02 ಅಕ್ಟೋಬರ್ 2026


ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
DR. MANMOHAN SINGH
BENGALURU CITY UNIVERSITY
ಮಹಾತ್ಮ ಗಾಂಧೀಜಿ ರವರ
157 ನೇ ಜನ್ಮ ದಿನಾಚರಣೆ




ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
DR. MANMOHAN SINGH
BENGALURU CITY UNIVERSITY
ಮಹಾತ್ಮ ಗಾಂಧೀಜಿ ರವರ
157 ನೇ ಜನ್ಮ ದಿನಾಚರಣೆ
ಶುಕ್ರವಾರ
02 ಅಕ್ಟೋಬರ್ 2026












ಮಹಾತ್ಮ ಗಾಂಧೀ
157 ನೇ ಜನ್ಮ ದಿನಾ
ಶುಕ್ರವಾರ
ಅಕ್ಟೋಬರ್

